ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5067/2014

ಫ್ರಾ ಸಾ 12 ಚಾ ಸಾ 13

ಹೆಸರುಃ ದಾಕ್ಷಾಯಿಣಿ

ಗಂಡನ ಹೆಸರುಃ ಬಾಲಗಂಗಾಧರ್

ವಯಸ್ಸುಃ 42 ವರ್ಷ

ಉದ್ಯೋಗಃ ಗೃಹಿಣಿ

ವಾಸಃ ಗೋಕುಲಂ, ಮೈಸೂರು.

ದಿಃ 12.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**<u>ಕಲಂ 299 ಸಿ ಆರ್. ಪಿ ಸಿ ರೀತ್ಯಾ ಸಾಕ್ಷ್ಯ</u>**

1. 2014 ಕ್ಕಿಂತ ಹಿಂದೆ ಸುಮಾರು 5 ವರ್ಷಗಳ ಕಾಲ ನಾನು ಮಣಿಪುರಂ ಹಣಕಾಸು ಸಂಸ್ದೆಯಲ್ಲಿ ವ್ಯವಸ್ದಾಪಕಳಾಗಿ ಕರ್ತವ್ಯ ಮಾಡುತ್ತಿದ್ದ ಸಮಯದಲ್ಲಿ 2010 ನೇ ಸಾಲಿನಲ್ಲಿ ಟಿ. ನರಸೀಪುರ ಶಾಖೆಯಲ್ಲಿ ಕರ್ತವ್ಯ ಮಾಡುತ್ತಿದ್ದ ಸಂದರ್ಭದಲ್ಲಿ ಸದರಿ ಸಂಸ್ದೆಯಲ್ಲಿ ಗ್ರಾಹಕರ ಚಿನ್ನವನ್ನು ಅಡವಿಟ್ಟುಕೊಂಡು ಸಾಲ ಕೊಡುವ ಕರ್ತವ್ಯವನ್ನು ಮಾಡುತ್ತಿದ್ದೆ.

2. ಸೊಸಲೇ ಗ್ರಾಮ ಟಿ. ನರಸೀಪುರ ವ್ಯಾಪ್ತಿಗೆ ಬರುತ್ತಿತ್ತು. ಸೋಸಲೇ ಗ್ರಾಮದ ರಾಜಶೇಖರ ಮೂರ್ತಿ ರವರು ದಿಃ 04.06.2011 ರಂದು 60 ಗ್ರಾಂ ತೂಕದ ಎರಡು ಎಳೆ ಚಿನ್ನದ ಮಾಂಗಲ್ಯ ಸರವನ್ನು ರೂ. 1,05,000/- ಕ್ಕೆ ಅಡವಿಟ್ಟಿದ್ದರು.

3. ಸದರಿ ಆಭರಣ ಚಿನ್ನದ ಆಭರಣ ಹೌದೋ ಅಲ್ಲವೋ ಎಂದು ನಮ್ಮ ಸಂಸ್ಥೆಯವರು ಪರೀಕ್ಷಿಸಿದ್ದರು.

4. ದಿಃ 12.07.2011 ರಂದು ಕ್ಯಾತಸಂದ್ರದ ವೃತ್ತ ನಿರೀಕ್ಷಕರು ಸದರಿ ರಾಜಶೇಖರ ಮೂರ್ತಿ ರವರನ್ನು ಅಂದರೆ ಈ ಪ್ರಕರಣದ 4 ನೇ ಆರೋಪಿಯನ್ನು ನಮ್ಮ ಫೈನಾನ್ಸ್ ಗೆ ಕರೆದುಕೊಂಡು ಬಂದಿದ್ದಾಗ ನಾನು ಆತನನ್ನು ಗುರುತಿಸಿರುತ್ತೇನೆ.

5. ಸದರಿ ವೃತ್ತ ನಿರೀಕ್ಷಕರು ಆರೋಪಿ ರಾಜಶೇಖರ ಮೂರ್ತಿ ಕಳ್ಳತನ ಮಾಡಿದ ಬಂಗಾರವನ್ನು ಅಡವಿಟ್ಟಿದ್ದಾನೆ, ಅದನ್ನು ವಶಕ್ಕೆ ಪಡೆಯಬೇಕು ಎಂದು ತಿಳಿಸಿದಾಗ ನಾನು ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ದಾಖಲೆಗಳನ್ನು ಪಡೆದು ನಮ್ಮ ಫೈನಾನ್ಸ್ ನಲ್ಲಿ ಇದ್ದ ಬಂಗಾರದ ಸರವನ್ನು ಪೊಲೀಸರಿಗೆ ಕೊಟ್ಟು ಆಗ ಮಾಡಿದ ಪಂಚನಾಮೆಗೆ ರುಜು ಮಾಡಿರುತ್ತೇನೆ.

6. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡಿದೆ. ಸಾಕ್ಷಿಯು ಗುರುತಿಸಿದ ಪಂಚನಾಮೆಯ ಪ್ರತಿಯನ್ನು ನಿ ಪಿ 34 ಮತ್ತು ಸಾಕ್ಷಿಯ ರುಜುವನ್ನು ನಿ ಪಿ 34 ಎ ಎಂದು ಗುರುತಿಸಲಾಯಿತು.

7. ನಾನು ತನಿಖಾಧಿಕಾರಿಯ ವಶಕ್ಕೆ ನೀಡಿದ ಚಿನ್ನದ ಸರವನ್ನು ಮತ್ತು ಸದರಿ ಸರವನ್ನು ಅಡವಿಟ್ಟ 4 ನೇ ಆರೋಪಿ ರಾಜಶೇಖರ ಮೂರ್ತಿಯನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ.

8. ಈ ಸಂಬಂಧವಾಗಿ ತನಿಖಾಧಿಕಾರಿ ನನ್ನನ್ನು ವಿಚಾರಿಸಿದಾಗ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)